# ವಿಪತ್ತು ಸಿದ್ಧತೆ ಸೂಚ್ಯಂಕ ಸಂಶೋಧನೆ ಎನ್‌ಐಟಿಕೆ ಪ್ರಾಧ್ಯಾಪಕನಿಂದ ಆವಿಷ್ಕಾರ

## ಏಷ್ಯಾದ ದೇಶಗಳಲ್ಲಿ ವ್ಯಾಪಕ ಬಳಕೆ

**ವಿಕ ಸುದ್ದಿಲೋಕ** ಸುರತ್ಕಲ್

ಎನ್‌ಐಟಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಶ್ರೀವಲ್ಸ ಕೊಳತ್ತಾಯ ಅವರು ಅಭಿವೃದ್ಧಿಪಡಿಸಿರುವ ವಿಪತ್ತು ಸಿದ್ಧತೆ ಸೂಚ್ಯಂಕ (ಡಿಪಿಐ) ಉಪಕರಣವನ್ನು ಏಷ್ಯಾದ ದೇಶಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ.

ಶ್ರೀವಲ್ಸ ಕೊಳತ್ತಾಯ ಅವರು ಎನ್‌ಐಟಿಕೆ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಾಸರಗೋಡು ಮೂಲದ ಇವರ ಸಂಶೋಧನಾ ಗುಂಪು ಪ್ರತಿ ವ್ಯಕ್ತಿ ಮತ್ತು ಮನೆಯವರ ಸನ್ನದ್ಧತೆ ಮಟ್ಟವನ್ನು ನಿರ್ಣಯಿಸಲು ವಿಪತ್ತು ವಿಪತ್ತು ಸಿದ್ಧತೆ ಸೂಚ್ಯಂಕ(ಡಿಪಿಐ) ಎಂಬ ಸಾಧನ ಅಭಿವೃದ್ಧಿಪಡಿಸಿದೆ.



ಡಾ. ಶ್ರೀವಲ್ಸ ಕೊಳತ್ತಾಯ

ಎನ್‌ಐಟಿಕೆಯಲ್ಲಿ ಅಭಿವೃದ್ಧಿ ಪಡಿಸಿದ ಡಿಪಿಐ ಉಪಕರಣವನ್ನು ಈಗ ಭಾರತ, ಫಿಲಿಪ್ಪೀನ್ಸ್, ಇಂಡೋನೇಷ್ಯಾ, ಮಲೇಷ್ಯಾ, ಬಾಂಗ್ಲಾದೇಶ ಸೇರಿದಂತೆ ಏಷ್ಯಾದ ಪ್ರಮುಖ ದೇಶಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಈ ಉಪಕರಣಕ್ಕಾಗಿ ನ್ಯೂಜಿಲೆಂಡ್, ಸ್ವಿಜರ್ಲೆಂಡ್‌ನ ಹಲವಾರು ಗುಂಪುಗಳಿಂದ ಮತ್ತು ಎನ್‌ಜಿಒಗಳಿಂದ ವಿನಂತಿಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ಎನ್‌ಐಟಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

Vijay Karnataka, Date:16/02/23 p, no -03